# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಬಿಡಿ/1305/2021
ಪಿಓ/ಎ.ಆರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:18/02/2021.

19

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ **ಶ್ರೀ. ಹೆಚ್. ಬಸವರಾಜ್ ಬಿನ್. ಜಯದೇವಪ್ಪ, ಅಸಿಸ್ಟೆಂಟ್ ಇಂಜಿನಿಯರ್ ಗ್ರೇಡ್-2, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ-ವಿಭಾಗ, ಶಿವಮೊಗ್ಗ ನಗರ, ಶಿವಮೊಗ್ಗ ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಹೆಚ್. ಬಸವರಾಜ್ ಬಿನ್. ಜಯದೇವಪ್ಪ, ಅಸಿಸ್ಟೆಂಟ್ ಇಂಜಿನಿಯರ್ ಗ್ರೇಡ್-2, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ-ವಿಭಾಗ, ಶಿವಮೊಗ್ಗ ನಗರ, ಶಿವಮೊಗ್ಗ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ. ಮಲ್ಲಯ್ಯ ವಿರೂಪಾಕ್ಷಯ್ಯ ಕಿತ್ತೂರ್ ಮಠ್, ಬಿನ್. ವಿರೂಪಾಕ್ಷಯ್ಯ, ಕಿತ್ತೂರ್ ಮಠ್, ವಾಸ: ಶ್ರೀರಾಮನಗರ, 6ನೇ ಕ್ರಾಸ್, ಜೈನ್ ಪಬ್ಲಿಕ್ ಸ್ಕೂಲ್ ಪಕ್ಕ, ಪಿ.ಬಿ. ರಸ್ತೆ ಹತ್ತಿರ, ರಾಣೇಬೆನ್ನೂರು, ಹಾವೇರಿ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಶಿವಮೊಗ್ಗ, ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ ಸಂ:06/2017 ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರು ಸುಮಾರು 25-ವರ್ಷಗಳಿಂದ ಬೋರ್‌ವೆಲ್ ಕೊರೆಸುವ ಗುತ್ತಿಗೆದಾರರಾಗಿ ಕೆಲಸ ಮಾಡಿಕೊಂಡಿದ್ದು, ಸೊರಬ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಲುವಾಗಿ ಬೋರ್‌ವೆಲ್ ಕೊರೆಸಲು ಟೆಂಡರ್ ಮೂಲಕ ಕಾಂಟ್ರಾಕ್ಟ್ ಪಡೆದು, 2015-16ನೇ ಸಾಲಿನಲ್ಲಿ ಸೊರಬ ತಾಲ್ಲೂಕಿನಲ್ಲಿ 63-ಬೋರ್‌ವೆಲ್‌ಗಳನ್ನು ಕೊರೆಸಿದ್ದು, ಅವುಗಳ ಬಾಬ್ತು ಕೆಲವು ಬಿಲ್ಲುಗಳನ್ನು ಹಂತ ಹಂತವಾಗಿ ಪಡೆದುಕೊಂಡಿರುತ್ತಾರೆ. ದೂರುದಾರರು ಪಾರ್ಶ್ವವಾಯು ಪೀಡಿತರಾಗಿದ್ದು, ಓಡಾಡಲು ಸಾಧ್ಯವಾಗದೇ ಇರುವುದರಿಂದ ಅವರ ಬಳಿ ಸಹಾಯಕನಾಗಿ ಕೆಲಸ ಮಾಡುತ್ತಿರುವ

ಪರಮೇಶ್ ಬಿನ್ ಶಿವಪ್ಪ ಕುಡುಪ್ಲಿ, ಇವರಿಗೆ ಶಿವಮೊಗ್ಗ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗದ ಕಚೇರಿಗೆ ಬಿಲ್ಲುಗಳ ಬಗ್ಗೆ ವಿಚಾರಿಸಲು ಆಗಾಗ್ಗೆ ಕಳುಹಿಸಿಕೊಡುತ್ತಿದ್ದು, ಸದರಿ ಪರಮೇಶ್ ರವರು ಪ್ರತಿಸಲ ಹೋದಾಗಲೂ ಸಹ ಎದುರುದಾರರು ಆ ದಾಖಲಾತಿ ಇಲ್ಲ, ಈ ದಾಖಲಾತಿ ಇಲ್ಲ ಎಂದು ಹೇಳಿ ವಾಪಸ್ ಕಳುಹಿಸುತ್ತಿದ್ದರಿಂದ, ದೂರುದಾರರು ಪರಮೇಶ್ ರವರಿಗೊಂದು ಮೊಬೈಲ್‌ನ್ನು ಕೊಟ್ಟು ಎದುರುದಾರರು ಮಾತನಾಡಿದ್ದನ್ನು ರೆಕಾರ್ಡ್ ಮಾಡಿಕೊಳ್ಳುವಂತೆ ತಿಳಿಸಿದ್ದು, ಅದರಂತೆ ಪರಮೇಶ್‌ರವರು ದಿನಾಂಕ: 09/06/2017 ರಂದು ಶಿವಮೊಗ್ಗ 100-ಅಡಿ ರಸ್ತೆಯಲ್ಲಿರುವ ದಾಮೋದರ್ ಪ್ಯಾರಡೈಸ್‌ನ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಉಪ-ವಿಭಾಗದ ತಾಂತ್ರಿಕ ಶಾಖೆಯ ಕಚೇರಿಗೆ ಹೋಗಿ ಬಾಕಿ ಇದ್ದ ಬಿಲ್ಲುಗಳ ಬಗ್ಗೆ ವಿಚಾರ ಮಾಡಿ ಕೋಟಿಪುರದ ಬಿಲ್ ಕೊಡಲು ಹೋದಾಗ, 'ಕೋಟಿಪುರದ್ದು ಈಗ ಮಾಡಲ್ಲ, ಸೊರಬ ತಾಲ್ಲೂಕ್ ನಿಸ್ರಾಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿಸ್ರಾಣಿಯದು ಅಷ್ಟೆ ಮಾಡ್ತೀನಿ, ನಿಮ್ಮ ಮಲ್ಲಯ್ಯರವರು (ದೂರುದಾರರು) ಅಲ್ಲೆ ಕೆಳಗೆ ಕೂತ್ಕೊಂಡು ಹೋದ್ರೆ ಆಗಲ್ಲಾ, ಅವರಿಗೆ ಬರಲಿಕ್ಕೆ ಆಗಲಿಲ್ಲ ಅಂದರೆ ಬೇರೆ ಯಾರಾದರೂ ಗೊತ್ತಿರೊರಿಗೆ ಕಳುಹಿಸಲು ಹೇಳು, ಅದಕ್ಕೆ ಎಸ್ಟಿಮೇಟ್ ಹಚ್ಚಿಕೊಂಡು ಬಾ, ಎಷ್ಟು ಅಂತ ಆಮೇಲೆ ಹೇಳ್ತೀನಿ, ಈಗ ಹೋಗು' ಅಂತ ಎದುರುದಾರರು ಪರಮೇಶ್‌ಗೆ ವಾಪಾಸ್ ಕಳುಹಿಸಿರುತ್ತಾರೆ. ಪುನ: ದಿನಾಂಕ: 15/06/2017ರಂದು ಪರಮೇಶ್ ರವರು ಎದುರುದಾರರನ್ನು ಭೇಟಿ ಮಾಡಿ 'ಸಾರ್ ದೂರುದಾರರಾದ ಮಲ್ಲಯ್ಯರು ಚೆಕ್‌ಅಪ್‌ಗೆ ಮಣಿಪಾಲ್‌ಗೆ ಹೋಗುತ್ತಾರೆ, ನಿಸ್ರಾಣಿ ಬಿಲ್ಲು ಮಾಡಿಕೊಡಿ' ಅಂದಾಗ ಎದುರುದಾರರು 'ಹಂಗೆ ಕೊಡಕ್ಕಾಗಲ್ಲ, 1000/-ದುಡ್ಡು ತಗೊಂಡು ಬಾ' ಅಂತ ಹೇಳಿದ್ದು, ಪರಮೇಶ್‌ರವರು ನಾಳೆ ಅಲ್ಲ ನಾಡಿದ್ದು ಬರ್ತಿನಿ ಅಂತ ಹೇಳಿ ವಾಪಸ್ ಬಂದಿರುತ್ತಾರೆ. ಸದರಿ ಸಂಭಾಷಣೆಯನ್ನು ತನ್ನ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ. ಈ ಹಿಂದೆ ದೂರುದಾರರು 63 ಬೋರ್‌ವೆಲ್‌ಗಳನ್ನು ಕೊರೆಸಿದ್ದು, ಅವುಗಳಲ್ಲಿ ಕೆಲವೊಂದು ಪಡೆದುಕೊಳ್ಳುವಾಗ ಎದುರುದಾರರಿಗೆ ರೂ.30,000/-ಲಂಚಕೊಟ್ಟು ಬಿಲ್ಲುಗಳನ್ನು ಪಾಸ್ ಮಾಡಿಸಿಕೊಂಡಿದ್ದು, ಪುನ: ಸೊರಬದ ನಿಸ್ರಾಣಿ ಗ್ರಾಮದ ಬೋರ್‌ವೆಲ್ ಕೊರೆಯಿಸಿದ ಬಿಲ್ಲಿನ ಚೆಕ್ ಕೊಡಲು ಅಲೆದಾಡಿಸುತ್ತಿದ್ದು, ಪ್ರತಿಯೊಂದು ಬೋರ್‌ವೆಲ್‌ನ ಚೆಕ್ಕಿಗೂ ತಲಾ 1000/-ರೂನಂತೆ ಕೊಡಬೇಕು ಅಂತ ಎದುರುದಾರರು ಕೇಳುತ್ತಾ ಇದ್ದು, ಸದರಿ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ದೂರುದಾರರ ಸಹಾಯಕನಾದ ಪರಮೇಶ್‌ರವರು ಅವರ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ.

ii. ದಿ: 17/06/2017 ರಂದು ಬೆಳಿಗ್ಗೆ 10-30 ಗಂಟೆಗೆ ದೂರುದಾರರು ಈಗಾಗಲೇ 30-ಸಾವಿರ ರೂಪಾಯಿ ಲಂಚದ ಹಣ ಕೊಟ್ಟಿದ್ದು, ಅವರಿಗೆ ಇನ್ನು ಪ್ರತಿಯೊಂದು ಬೋರ್‌ವೆಲ್‌ನ ಚೆಕ್ಕಿಗೂ 1000/-ಸಾವಿರ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ಕಂಪ್ಯೂಟರ್ ಮುದ್ರಿತ ದೂರು ನೀಡಿದ್ದು, ಅದರ ಆಧಾರದ ಮೇಲೆ ಶಿವಮೊಗ್ಗ ಎಸಿಬಿ ಪೋಲಿಸ್ ಠಾಣೆ ಮೊ. ಸಂ.

06/2017 ರಲ್ಲಿ ಕಲಂ 7, 13(1) (ಡಿ) ಸಹ ಕಲಂ 13 (2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ. ದಿನೇಶ್ ಕುಮಾರ್ (ನೆರಳು ಸಾಕ್ಷಿ) 2) ಶ್ರೀ. ಕೃಷ್ಣಮೂರ್ತಿ, ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದ್ದ ವಾಯ್ಸ್ ಕ್ಲಿಪ್ಪಿಂಗ್‌ಗಳನ್ನು ತೋರಿಸಿದ್ದು, ಡಾಟಾ ಕೇಬಲ್ ಮೂಲಕ ಸದರಿ ವಾಯ್ಸ್ ಕ್ಲಿಪ್ಪಿಂಗ್‌ಗಳನ್ನು ಕಂಪ್ಯೂಟರ್‌ಗೆ ಹಾಕಿರುತ್ತಾರೆ ಹಾಗೂ ಎರಡು ಸಿಡಿಗಳಿಗೆ ವರ್ಗಾಯಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ.500/– ಮುಖಬೆಲೆಯ 02–ನೋಟುಗಳು) ಒಟ್ಟು 1,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ಮೌಲ್ಯ ಹಾಗೂ ನಂ.ಗಳನ್ನು ಪಂಚರು ಪರಿಶೀಲಿಸಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿದ್ದು, ಸದರಿ ಹಣವನ್ನು ಪಂಚ ಸಾಕ್ಷಿ ಕೃಷ್ಣಮೂರ್ತಿರವರ ಮೂಲಕ ದೂರುದಾರರ ಸಹಾಯಕನಾದ ಪರಮೇಶ್‌ರವರ ಪ್ಯಾಂಟಿನ ಬಲಭಾಗದ ಮುಂಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ ಕೃಷ್ಣಮೂರ್ತಿರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ದಿನೇಶ್‌ಕುಮಾರ್‌ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರ ಸಹಾಯಕನಾದ ಪರಮೇಶ್‌ರವರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ಕೈಗಳಿಂದ ತಲೆಯನ್ನು ಒರೆಸಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಮ್ಮ ಮೊಬೈಲ್‌ನ್ನು ಆನ್ ಮಾಡಿಕೊಂಡು ಹೋಗಿ ರೆಕಾರ್ಡ್ ಮಾಡಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿನಾಂಕ: 17.06.2017ರಂದು ಬೆಳಿಗ್ಗೆ 11–15ರಿಂದ ಮಧ್ಯಾಹ್ನ 12–30 ಗಂಟೆಯವರಿಗೆ ಶಿವಮೊಗ್ಗ ಎಸಿಬಿ ಕಚೇರಿಯಲ್ಲಿ ತನಿಖಾಧಿಕಾರಿಗಳು ಪ್ರಾಯೋಗಿಕ ಪಂಚನಾಮೆಯನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿರುತ್ತಾರೆ.

iv. ಅದೇ ದಿನ ಮಧ್ಯಾಹ್ನ 12–45 ಗಂಟೆಗೆ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಶಿವಮೊಗ್ಗ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗದ ಕಚೇರಿಯ ಬಳಿ ಬಂದು ದೂರುದಾರರು, ಅವರ ಸಹಾಯಕನಾದ ಪರಮೇಶ್ ಹಾಗೂ

ನೆರಳು ಸಾಕ್ಷಿ ದಿನೇಶ್ ಕುಮಾರ್‌ರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ ಎದುರುದಾರರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿದ್ದು, ಸದರಿ ಪರಮೇಶ್ ನೆರಳು ಸಾಕ್ಷಿಯೊಂದಿಗೆ ಬಂದು ಎದುರುದಾರರನ್ನು ಭೇಟಿ ಮಾಡಿದಾಗ ಎದುರುದಾರರು ದೂರುದಾರರಿಂದ ರೂ.1000/- ಲಂಚದ ಹಣವನ್ನು ಕೇಳಿ ಅವರ ಬಲಗೈಯಿಂದ ಪಡೆದು ಷರ್ಟಿನ ಮೇಲಿನ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಸ್ವಲ್ಪ ಸಮಯದ ನಂತರ ಮೆಟ್ಟಿಲಿನ ಬಳಿ ಬಂದು ದೂರುದಾರರ ಸಹಾಯಕನಾದ ಪರಮೇಶ್‌ರವರು ತಮ್ಮ ಕೈಯಿಂದ ಮುಖ ಒರೆಸಿಕೊಳ್ಳುವ ಮೂಲಕ ತನಿಖಾಧಿಕಾರಿಗಳಿಗೆ ಸನ್ನೆ ಮಾಡಿರುತ್ತಾರೆ.

v. ಆ ಸಂದರ್ಭದಲ್ಲಿ ದೂರುದಾರರ ಸಹಾಯಕ ಪರಮೇಶ್ ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ಸದರಿ ಎದುರುದಾರರು ಇದ್ದ ಸ್ಥಳಕ್ಕೆ ಬಂದು ಅವರ ಗುರುತಿನ ಚೀಟಿ ತೋರಿಸಿ, ಅವರ ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ತನಿಖಾಧಿಕಾರಿಗಳು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರ ಎಡಗೈ ಬೆರಳುಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಯಾವುದೇ ಬಣ್ಣಕ್ಕೆ ತಿರುಗಿರುವುದಿಲ್ಲ. ತನಿಖಾಧಿಕಾರಿಗಳು ದೂರುದಾರರ ಸಹಾಯಕ ಪರಮೇಶ್‌ರವರಿಂದ ಪಡೆದ ಲಂಚದ ಹಣವನ್ನು ಹಾಜರುಪಡಿಸಲು ತಿಳಿಸಿದಾಗ, ಎದುರುದಾರರು ಅವರು ಧರಿಸಿದ್ದ ಷರ್ಟಿನ ಎಡಭಾಗದ ಜೇಬಿನಿಂದ ಲಂಚದ ಹಣವನ್ನು ತೆಗೆದು ಹಾಜರುಪಡಿಸಿರುತ್ತಾರೆ. ಪಂಚರ ಮೂಲಕ ಅವುಗಳನ್ನು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಬದಲೀ ಶರ್ಟಿನ ವ್ಯವಸ್ಥೆ ಮಾಡಿ, ಲಂಚದ ಹಣ ಇಟ್ಟ ಎಡಭಾಗದ ಮುಂಭಾಗದ ಜೇಬಿನ ಒಳಭಾಗವನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಹಣವನ್ನು ಮತ್ತು ಸದರಿ ಶರ್ಟನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರ ಸಹಾಯಕ ಪರಮೇಶ್‌ರವರನ್ನು ಹಾಗೂ ಪಂಚಸಾಕ್ಷಿ ದಿನೇಶ್‌ಕುಮಾರ್‌ರವರನ್ನು ಅಲ್ಲಿ ನಡೆದ ಘಟನೆಯ ಬಗ್ಗೆ ಕೇಳಿ ತಿಳಿದುಕೊಂಡಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ದೂರುದಾರರ ಸಹಾಯಕ ಪರಮೇಶ್‌ರವರಿಗೆ ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ಎದುರುದಾರರನ್ನು ಭೇಟಿ ಮಾಡುವ ಸಮಯದಲ್ಲಿ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿದ್ದು, ಸದರಿ

ಮೊಬೈಲ್‌ನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಅದನ್ನು ಪರಿಶೀಲಿಸಿದಾಗ ಅದರಲ್ಲಿ ಸಂಭಾಷಣೆ ರೆಕಾರ್ಡ್ ಆಗದೇ ಇರುವುದು ಕಂಡುಬಂದಿರುತ್ತದೆ.

vii. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ದಿನಾಂಕ:17/06/2017ರಂದು ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮೀಟಿಂಗ್ ಮುಗಿಸಿಕೊಂಡು ವಿಭಾಗ ಕಚೇರಿಗೆ ಬಂದಾಗ, ಸೊರಬ ತಾ. ನಿಸ್ರಾಣಿ ಗ್ರಾಮದ ಬೋರ್‌ವೆಲ್ ಕಾಮಗಾರಿಯ ತುಂಡು ಗುತ್ತಿಗೆ ಕರಾರನ್ನು ನೀಡುವಂತೆ ಸಿ. ಮಲ್ಲಯ್ಯ ಇವರು ತಿಳಿಸಿದಂತೆ ಅವರು ಕಳುಹಿಸಿರುವ ವ್ಯಕ್ತಿಗೆ ದಾಖಲೆಗಳನ್ನು ನೀಡಲಾಗಿದ್ದು, ನಾನು ಯಾವುದೇ ಹಣ ಕೇಳದಿದ್ದರೂ ಸಹಾ ಆ ವ್ಯಕ್ತಿಯು ಬಲವಂತವಾಗಿ ಕೈಯ್ಯಲ್ಲಿ ಹಣ ತುರುಕಿ ಹೋಗಿರುತ್ತಾರೆ. ನಾನು ಯಾವುದೇ ರೀತಿಯ ಹಣ ಕೇಳಿರುವುದಿಲ್ಲ. ಇದರಲ್ಲಿ ನನ್ನ ತಪ್ಪು ಇರುವುದಿಲ್ಲವೆಂದು ತಮ್ಮ ದಯಾಪರ ಅವಗಾಹನೆಗೆ ಸಲ್ಲಿಸುತ್ತಿದ್ದೇನೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ.

viii. ನಂತರ ತನಿಖಾಧಿಕಾರಿಗಳು ದೂರುದಾರರ ಸಹಾಯಕ ಪರಮೇಶ್‌ರವರಿಗೆ ಹಾಗೂ ನೆರಳುಸಾಕ್ಷಿಯವರಿಗೆ ಎದುರುದಾರರ ಸಮಜಾಯಿಷಿಯ ಬಗ್ಗೆ ಕೇಳಿದಾಗ, ಅವರುಗಳು "ಆಪಾದಿತರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ಬರೆದಿರುವುದು ಸುಳ್ಳಾಗಿದ್ದು, ಹಣವನ್ನು ಕೇಳಿ ಪಡೆದುಕೊಂಡರು" ಎಂದು ಬರೆದು ಸಹಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂಧ ಪಟ್ಟ ಕಡತವನ್ನು ಹಾಜರುಪಡಿಸುವಂತೆ ಎದುರುದಾರರಿಗೆ ತಿಳಿಸಿದಾಗ, ಎದುರುದಾರರು ದೂರುದಾರರಿಗೆ ಸಂಬಂಧ ಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಆ ದಾಖಲಾತಿಗಳ ಪ್ರತಿಗಳನ್ನು ಜೆರಾಕ್ಸ್ ಮಾಡಿಸಿ ಶ್ರೀ. ಎಸ್. ಎಮ್. ಹರೀಶ್, ಎ.ಇ.ಇ.ರವರಿಂದ ಧೃಡೀಕರಿಸಿಕೊಂಡು ವಶಕ್ಕೆ ಪಡೆದಿರುತ್ತಾರೆ ಹಾಗೂ ಎಸ್. ಎಮ್. ಹರೀಶ್, ಎ.ಇ.ಇ.ರವರಿಂದ ಜೂನ್ 2017ರ ಹಾಜರಾತಿ ವಹಿಯನ್ನು ಜೆರಾಕ್ಸ್ ಮಾಡಿಸಿ ಧೃಡೀಕರಿಸಿಕೊಂಡು ವಶಕ್ಕೆ ಪಡೆದಿರುತ್ತಾರೆ.

ix. ನಂತರ ತನಿಖಾಧಿಕಾರಿಗಳು ಟ್ರ್ಯಾಪ್ ಪೂರ್ವದಲ್ಲಿ ದೂರುದಾರರು ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದು, ಅದರ ಮೆಮೊರಿ ಕಾರ್ಡ್‌ನ್ನು ಲ್ಯಾಪ್ ಟಾಪ್‌ಗೆ ಹಾಕಿ, ಅದರಲ್ಲಿರುವ ಸಂಭಾಷಣೆಯನ್ನು ಪ್ಲೇ ಮಾಡಿ ಎದುರುದಾರರ ಮೇಲಾಧಿಕಾರಿಗಳಾದ ಶ್ರೀ. ಎಸ್. ಎಮ್. ಹರೀಶ್, ಎ.ಇ.ಇ. ರವರಿಗೆ ಕೇಳಿಸಿದಾಗ, ಅವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ ಹಾಗೂ ಎದುರುದಾರರನ್ನು ದಸ್ತಗಿರಿ ಮಾಡಿ ಅವರ ಮೇಲಾಧಿಕಾರಿಗಳಾದ ಶ್ರೀ. ಎಸ್. ಎಮ್. ಹರೀಶ್, ಎ.ಇ.ಇ. ರವರಿಗೆ ತಿಳಿಸಿರುತ್ತಾರೆ.

x. ಈ ಎಲ್ಲಾ ಪ್ರಕ್ರಿಯೆಗಳನ್ನು ವಿವಿಧ ಹಂತಗಳಲ್ಲಿ ಫೋಟೋ ತೆಗೆಯಿಸಿ, ತನಿಖಾಧಿಕಾರಿಗಳು ದಿನಾಂಕ: 17/06/2017ರಂದು ಮಧ್ಯಾಹ್ನ 01–11 ಗಂಟೆಯಿಂದ ಸಂಜೆ 5–30 ಗಂಟೆಯವರೆಗೆ, ಶಿವಮೊಗ್ಗ 100–ಅಡಿ ರಸ್ತೆಯಲ್ಲಿರುವ ದಾಮೋದರ್

ಪ್ಯಾರಡೈಸ್‌ನ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಉಪ-ವಿಭಾಗದ ತಾಂತ್ರಿಕ ಶಾಖೆಯ ಕಚೇರಿಯಲ್ಲಿ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿಗೆ ಮೂಲಕ ಟ್ರಾಪ್ ಮಹಜರ್‌ನ್ನು ಲ್ಯಾಪ್ ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

xi. ನಂತರ ತನಿಖಾಧಿಕಾರಿಗಳು ದಿನಾಂಕ:17/07/2017ರಂದು ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಟ್ರ್ಯಾಪ್ ಪೂರ್ವದಲ್ಲಿ ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ನಲ್ಲಿ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಸಿಡಿಗಳನ್ನು ತಯಾರಿಸಿರುತ್ತಾರೆ ಹಾಗೂ ಈ ಬಗ್ಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತಾರೆ.

xii. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಶನಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xiii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 04/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರು ತಪ್ಪು ಗ್ರಹಿಕೆಯಿಂದ ಕೂಡಿದ ಸುಳ್ಳು ದೂರಾಗಿದ್ದು, ದೂರುದಾರರು ಬೋರ್‌ವೆಲ್ ಕೊರೆಸಲು ಟೆಂಡರ್ ಮೂಲಕವಾಗಲೀ ಅಥವಾ ತುಂಡು ಗುತ್ತಿಗೆ ಮೂಲಕವಾಗಲೀ ಕಾಂಟ್ರಾಕ್ಟ್ ಪಡೆದಿರುವುದಿಲ್ಲ ಹಾಗೂ ಕಾಮಗಾರಿಯನ್ನು ನಿರ್ವಹಿಸಿರುವುದಿಲ್ಲ, ದೂರುದಾರರು ಪಾರ್ಶ್ವವಾಯು ಪೀಡಿತರಾಗಿದ್ದು, ಅದರಿಂದಾಗಿ ಓಡಾಡಲು ಸಾಧ್ಯವಾಗದೇ ವಿಷಯದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಅಲ್ಲದೇ ಒಬ್ಬ ಪರಮೇಶ್ ಎನ್ನುವವರು ಅವರ ಸಹಾಯಕರಾಗಿದ್ದರು

ಮತ್ತು ದೂರುದಾರರ ಬಿಲ್ಲುಗಳ ಬಗ್ಗೆ ಆಗಾಗ್ಗೆ ಕಚೇರಿಗೆ ಬಂದು ವಿಚಾರಿಸುತ್ತಿದ್ದರು ಎನ್ನುವ ವಿಷಯವೂ ಸಹಾ ನನಗೆ ತಿಳಿದಿರುವುದಿಲ್ಲ. ಪರಮೇಶ್ ಇವರು ದಿ:09/06/2017 ಮತ್ತು ದಿ:15/06/2017ರಂದು ನನ್ನನ್ನು ಭೇಟಿಯಾಗಿ ಮಾತನಾಡಿದರು ಮತ್ತು ನಾನು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದೇನೆ ಎನ್ನುವುದು ಶುದ್ದ ಸುಳ್ಳು ಮತ್ತು ರೆಕಾರ್ಡ್ ಮಾಡಿದ್ದಾರೆ ಎಂದು ಹೇಳುವ ಧ್ವನಿ ನನ್ನದಲ್ಲ, ದೂರುದಾರರು 30,000/- ರೂ. ಲಂಚ ಕೊಟ್ಟು ಬಿಲ್ಲುಗಳನ್ನು ಪಾಸ್ ಮಾಡಿಸಿಕೊಂಡಿದ್ದೆ ಎಂದು ನಮೂದಿಸಿದ್ದು, ಲಂಚ ಕೊಡುವುದು ಒಂದು ಅಪರಾಧವೇ ಆಗಿದ್ದು, ಇದರ ಬಗ್ಗೆ ಪೋಲೀಸರು ದೂರುದಾರರಿಂದ ಯಾವುದೇ ವಿವರಣೆ ಪಡೆದಿರುವುದಿಲ್ಲ ಮತ್ತು ಅವರ ಮೇಲೆ ಕ್ರಮ ಕೈಗೊಂಡಿರುವುದಿಲ್ಲ. ಪರಮೇಶ್‌ರವರು ದಿ:15/06/2017ರಂದು ನನ್ನನ್ನು ಭೇಟಿಯಾಗಿರಲೇ ಇಲ್ಲ, ಆ ಕಾರಣದಿಂದ ನಮ್ಮಿಬ್ಬರಲ್ಲಿ ಯಾವ ಸಂಭಾಷಣೆ ನಡದೇ ಇಲ್ಲ. ತನಿಖಾಧಿಕಾರಿಗಳು ಹಣ ಕೊಟ್ಟ ಪರಮೇಶ್‌ರವರ ಕೈಯನ್ನು ತೊಳೆಸಿರುವುದಿಲ್ಲ. ಟ್ರ್ಯಾಪ್ ದಿನದಂದು ನನ್ನಿಂದ ಆಗಬೇಕಾದ ಕೆಲಸ ಬಾಕಿ ಇರುವುದಿಲ್ಲ. ಈ ಪ್ರಕರಣದಲ್ಲಿ ರೆಕಾರ್ಡ್ ಮಾಡಿಕೊಳ್ಳಲಾಗಿದೆ ಎಂದು ಹೇಳುವ ಧ್ವನಿಯು ನನ್ನದಲ್ಲ. ಮೇಲೆ ಹೇಳಿದ ಕಾರಣಗಳಿಂದಾಗಿ, ನನ್ನ ವಿರುದ್ಧ ನೀಡಿರುವ ದೂರು ಸುಳ್ಳು ದೂರಾಗಿದ್ದು, ತನಿಖೆಯೂ ಸಹಾ ಪೂರ್ವಾಗ್ರಹ ಪೀಡಿತವಾಗಿದ್ದು, ವಸ್ತುನಿಷ್ಟವಾಗಿರುವುದಿಲ್ಲ. ದೂರುದಾರರ ತಪ್ಪಿಗೆ ಅವರಿಗೆ ಹಣ ಪಾವತಿಯಾಗಿರುವುದಿಲ್ಲ, ಇದಕ್ಕೆ ನಾನೇ ಕಾರಣ ಎಂದು ತಪ್ಪು ಕಲ್ಪನೆ ಮಾಡಿಕೊಂಡು ನನ್ನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದಾರೆ, ಆದ್ದರಿಂದ ನನ್ನ ಮೇಲೆ ಉದ್ದೇಶಿತ ಕ್ರಮವನ್ನು ಕೈ ಬಿಡುವಂತೆ ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

19/2/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು-1**
**ಕರ್ನಾಟಕ ರಾಜ್ಯ, ಬೆಂಗಳೂರು.**